1	2	3	4
14.	Chickmagalur	19533	11114
15.	Kodagu	3760	1042
16.	Hassan	29326	13870
17.	Mandya	14833	8157
18.	Mysore	36768	20579
19.	Dakshina Kannada	176235	136789
	Total	280455	191551
	Grand Total	813268	484664

ಸಹಕಾರಿ ಸಂಘಗಳ ಸಾಲ ವಸೂಲಿ

೨೪೮ (೨೨೩) ಶ್ರೀ ಎ. ಬಿ. ಅಪ್ಪಾಸ್ವಾಮಿರೆಡ್ಡಿ (ಬಾಗೇಪಲ್ಲಿ).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಾಗೇಪಲ್ಲಿ, ಗುಡಿಬಂಡೆ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿರುವ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು ?

ಆ) ಈ ಸಂಘಗಳಲ್ಲಿ ಇನ್ನು ವಸೂಲಾಗಬೇಕಾಗಿರುವ ಹಣದ ಒಟ್ಟು ಮೊತ್ತವೆಷ್ಟು?

ಇ) ಈ ರೈತರುಗಳಲ್ಲಿ ಸಣ್ಣ ಅತಿಸಣ್ಣ ಮತ್ತು ದೊಡ್ಡ ರೈತರುಗಳ ಸಂಖ್ಯೆ ಎಷ್ಟು?

ಈ) ಮೇಲೆ ಹೇಳಿದ ತಾಲ್ಲೂಕುಗಳಲ್ಲಿ ಈಗ ತೀವ್ರ ಕ್ಷಾಮದ ಪರಿಸ್ಥಿತಿ ಇರುವುದರಿಂದ ಸಾಲ ವಸೂಲಾತಿಯನ್ನು ಮುಂದೆ ಹಾಕಲುದ್ದೇಶಿಸುವರೆ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಕ್ರಮವಾಗಿ ೨೫, ೫ ಮತ್ತು ೪೫ ಇವೆ.

ಆ) ರೂ. ೧೧೨-೪೯ ಲಕ್ಷಗಳು.

ಇ) ೧. ಸಣ್ಣ/ಅತಿ ಸಣ್ಣ ರೈತರು ೬೯೧೭

೨. ದೊಡ್ಡ ರೈತರು ೧೬೮೩

ಈ) ಇಲ್ಲ. ಆದರೆ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಬೆಳೆ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಮತ್ತು ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಪುರ್ನನಿಗದಿಪಡಿಸಿ ಅವುಗಳ ವಸೂಲಿ ಮುಂದೂಡಲು ಅವಕಾಶವಿದೆ.

ಅರಸೀಕೆರೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಬಗ್ಗೆ

೨೪೯ (೨೭೦) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಅರಸೀಕೆರೆ ವ್ಯವಸಾಯೋತ್ಪನ್ನ ಮಾರುಕಟ್ಟೆಯಲ್ಲಿ ಹಾಲಿ ಮಾರಾಟಕ್ಕೆ ಬರುತ್ತಿರುವ ಪದಾರ್ಥಗಳಾವುವು?

ಆ) ಮಾರುಕಟ್ಟೆ ಆಡಳಿತ ಮಂಡಲಿಯು ಯಾವ ಸಾಮಾನುಗಳನ್ನು ಮಾರಾಟ ಮಾಡ ಬೇಕೆಂದು ತೀರ್ಮಾನಿಸಿದೆ?

ಇ) ಅಕ್ಕಿಯು ಹೇರಳವಾಗಿ ಅರಸೀಕೆರೆಗೆ ಬರುತ್ತಿದ್ದು ಮಾರುಕಟ್ಟೆಯಲ್ಲಿ ಮಾರಾಟವಾಗದೆ ಹೊರಗಡೆ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಪ್ರತಿ ತಿಂಗಳು ಮಾರ್ಕೆಟ್ಟು ಸುಂಕ ಎಷ್ಟು ನಷ್ಟವಾಗುತ್ತಿದೆ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರಿ ಮಂತ್ರಿಗಳು).—

ಅ) ೧) ತೆಂಗಿನಕಾಯಿ ೨) ಕೊಬ್ಬರಿ ೩) ಸೀಗು ೪) ಹುಚ್ಚೆಳ್ಳು ೫) ನೆಲಗಡಲೆಕಾಯಿ ೬) ಎಳ್ಳು ೭) ಹತ್ತಿ ೮) ಹರಳುಬೀಜ ೯) ಹುರುಳಿ.

ಆ) ಮಾರುಕಟ್ಟೆ ಆಡಳಿತ ಮಂಡಳಿಯು ಯಾವ ಸಾಮಾನುಗಳನ್ನು ಮಾರಾಟ ಮಾಡಲು ತೀರ್ಮಾನಿಸುವುದಿಲ್ಲ. ಆದರೆ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ ೧೯೬೬ರ ಪ್ರಕಾರ ಅರಸೀಕೆರೆ ಮಾರುಕಟ್ಟೆ ಸಮಿತಿಯ ಕ್ಷೇತ್ರದಲ್ಲಿ ಈ ಕೆಳಗೆ ಕಾಣಿಸಿದ ವ್ಯವಸಾಯೋತ್ಪನ್ನಗಳ ಮಾರಾಟವನ್ನು ನಿಯಂತ್ರಣದ ಕಕ್ಷೆಗೆ ಸರ್ಕಾರದ ಪ್ರಕಟಣೆಯ ಮೇರೆಗೆ ಒಳಪಡಿಸಲಾಗಿದೆ.

೧) ತೆಂಗಿನಕಾಯಿ	೧೩) ಮಾವಿನಹಣ್ಣು
೨) ಕೊಬ್ಬರಿ	೧೪) ನೆಲಗಡಲೆಕಾಯಿ
೩) ಹತ್ತಿ	೧೫) ಹುಚ್ಚೆಳ್ಳು
೪) ಬೆಲ್ಲ	೧೬) ಹರಳುಬೀಜ
೫) ಮೆಣಸಿನಕಾಯಿ	೧೭) ರಾಗಿ
೬) ಎಳ್ಳು	೧೮) ಜೋಳ
೭) ಸೀಗು	೧೯) ಆಲೂಗಡ್ಡೆ
೮) ಧನಿಯಾ	೨೦) ಬೆಳ್ಳುಳ್ಳಿ
೯) ಭತ್ತ	೨೧) ಜಾನುವಾರುಗಳು
೧೦) ಅಕ್ಕಿ	೨೨) ಕುರಿ
೧೧) ಹುರುಳಿ	೨೩) ಆಡು
೧೨) ಬೇಳೆಕಾಳುಗಳು	೨೪) ಕುಕ್ಕುಟವರ್ಗ

ಇ) ಅಕ್ಕಿಯ ವ್ಯಾಪಾರವು ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಿಸಲಾಗಿಲ್ಲ ಕಾರಣ ಅಕ್ಕಿಯು ಪ್ರಾಂಗಣದ ಹೊರಗೆ ಮಾರಾಟವಾಗುತ್ತದೆ ಮತ್ತು ಅಂಥ ಮಾರಾಟದ ಮೇಲೆ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಲಾಗುತ್ತದೆ.

ಈ) ಅಕ್ಕಿ ಮಾರಾಟದ ಮೇಲೆ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡುತ್ತಿರುವ ಯಾವ ನಷ್ಟವೂ ಆಗುತ್ತಿಲ್ಲ.

ಬೆಂಗಳೂರಿನಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ಮಂಜೂರು ಮಾಡುವುದು

೨೫೫ (೨೨೧) ಶ್ರೀ ಪಿ. ರಾಮದೇವ್ (ಪುಲ್ಲೇಶ್ವರ).—ಪೌರಾಡಳಿತ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೧–೮೨, ೧೯೮೨–೮೩ ಮತ್ತು ೧೯೮೩–೮೪ನೇ ವರ್ಷದ ಸಾಲಿನಲ್ಲಿ ಬೆಂಗಳೂರು ನಗರ ಕಾರ್ಪೊರೇಷನ್ ಮಂಜೂರು ಮಾಡಿದ ಬಹು ಅಂತಸ್ತಿನ ಕಟ್ಟಡಗಳೆಷ್ಟು ?

ಆ) ಈ ಕಟ್ಟಡಗಳಲ್ಲಿ ಅಂತಸ್ತುಗಳ ಸಂಖ್ಯೆಗಳನುಸಾರವಾಗಿ ಎಷ್ಟು ಮಂಜೂರು ಮಾಡಿದೆ?